# ಕ್ಯೂಟ್ ಲುಕ್‌ಗೆ ಕ್ರಾಪ್ ಟಾಪ್

ಸ್ಲಿಮ್ ಹುಡುಗಿಯರು ಇನ್ನಷ್ಟು ಹಾಟ್ ಆಗಿ ಕಾಣಿಸಿ, ಅವರ ಅಂದ ಇನ್ನಷ್ಟು ಹೆಚ್ಚಿಸಲೆಂದೇ ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ ಕ್ರಾಪ್‌ಟಾಪ್.

★ ಸಿಂಚನಾ ಎಸ್.ಎನ್.



ಎಂಬತ್ತರ ದಶಕದಲ್ಲಿ ಪಾಪ್ ತಾರೆ ಮಡೋನ್ನಾ ಹೊಟ್ಟೆ ಕಾಣಿಸುವಂತೆ ಗಿಡ್ಡನೆಯ ಟಾಪ್ ಧರಿಸಿ 'ಲಕ್ಕಿ ಸ್ಟಾರ್' ಆಲ್ಬನ್ ಗಾಗಿ ಗಾಯನ ಹಾಡಲು ವೇದಿಕೆ ಏರಿದ್ದಾಗ ಭಾರೀ ಕೋಲಾಹಲ ಉಂಟಾಗಿತ್ತು. ಎಲ್ಲೆಡೆ ಇದರ ಚರ್ಚೆ ಆಗಿತ್ತು, ವಿವಾದವೂ ಸೃಷ್ಟಿಯಾಗಿತ್ತು!

ಅದೇ ಮೊನ್ನೆ ಮೊನ್ನೆ ಬಾಲಿವುಡ್ ತಾರೆ ತಮನ್ನಾ 'ಹಮ್‌ಶಕಲ್' ಚಿತ್ರದ ಪ್ರಚಾರಕ್ಕೆ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದಾಗ ಇದೇ ದಿರಿಸು ತೊಟ್ಟು ಬಂದು ಎಲ್ಲರೂ ವ್ಹಾ ವ್ಹಾ ಎನ್ನುವ ಹಾಗೆ ಮಾಡಿದ್ದರು. ಪಡ್ಡೆ ಹುಡುಗರ ಹಾರ್ಟ್ ಬೀಟ್ ಹೆಚ್ಚಿಸಿದ್ದರು. ನಾವೂ ಇಂಥದ್ದೇ ದಿರಿಸು ತೊಡಬೇಕು ಎಂಬ ಆಕಾಂಕ್ಷೆಯನ್ನು ತರುಣಿಯರ ಮನಸ್ಸಿನಲ್ಲಿ ಮೂಡಿಸಿದ್ದರು.

ಅಲ್ಪ ಕಾಲದಲ್ಲಿಯೇ ಇಷ್ಟೊಂದು ಜನಪ್ರಿಯತೆಗೆ ಕಾರಣವಾಗಿರುವ ಈ ಉಡುಪು ಕ್ರಾಪ್ ಟಾಪ್. ಇದೀಗ ಬಾಲಿವುಡ್, ಹಾಲಿವುಡ್ ಅಷ್ಟೇ ಏಕೆ ನಮ್ಮ ಸ್ಯಾಂಡಲ್‌ವುಡ್ ನಾಯಕಿಯರ, ಮಾಡೆಲ್‌ಗಳ ಮೈಮೇಲೂ ಇದು ನಲಿದಾಡುತ್ತಿದೆ. ಇದರಲ್ಲಿಯೇ ಹೊಸ ಹೊಸ ವಿನ್ಯಾಸ ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಈ ಟಾಪ್‌ಗಳ ವಿನ್ಯಾಸಕ್ಕೆ ತಕ್ಕಂತೆ ಬಗೆಬಗೆಯ ಬಾಟಮ್‌ಗಳೂ ಲಭ್ಯವಾಗುತ್ತಿವೆ.

ಸ್ಲಿಮ್ ಹುಡುಗಿಯರು ಇನ್ನಷ್ಟು ಹಾಟ್ ಆಗಿ ಕಾಣಿಸಿ, ಅವರ ಅಂದ ಇನ್ನಷ್ಟು ಹೆಚ್ಚಿಸಲು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ ಕ್ರಾಪ್‌ಟಾಪ್. ಹೆಸರೇ ಹೇಳುವಂತೆ ಇದರ ಟಾಪ್ ಅನ್ನು ಕ್ರಾಪ್ ಮಾಡಲಾಗಿದೆ. ಟಾಪ್ ಹಾಕಿದರೂ ಹಾಕದಂತೆ ಕಾಣುವ, ಕೆಲವರ ಕಣ್ಣಿಗೆ ಬಟ್ಟೆ ಹಾಕುವಲ್ಲಿ ಚೌಕಾಶಿ ಮಾಡಿದಂತೆ ಕಾಣುತ್ತದೆ ಈ ದಿರಿಸು. ಉದ್ದನೆಯ ಷರ್ಟ್ ತನ್ನ ಅಳತೆಯನ್ನು ಕ್ರಾಪ್ ಮಾಡಿಕೊಂಡು ಬಂದಂತೆ ಕಾಣುತ್ತದೆ. ಅಂದರೆ ಹೊಟ್ಟೆಯ ಮೇಲುಗಡೆಯವರೆಗೆ ಮೈಯನ್ನು ಮುಚ್ಚಿ, ಲಲನೆಯರ ಸುಂದರ ಹೊಕ್ಕಳನ್ನು ಕಾಣಿಸುವಂತೆ ಇದರ ಸ್ವರೂಪ ಇದೆ.

ಅದೇನೇ ಇದ್ದರೂ, ಕ್ರಾಪ್‌ಟಾಪ್‌ನಲ್ಲಿ ವೆಸ್ಟ್ ಲೈನ್ ಚೆನ್ನಾಗಿ ಕಾಣಿಸುವ ಕಾರಣದಿಂದ ಇದು ಬಳಕುವ ಲತಾಂಗಿಯರಿಗೆ ಕ್ಯೂಟ್ ಲುಕ್ ನೀಡುತ್ತದೆ. ಇನ್ನು ಹುಡುಗಿಯರು ನೀಳದೇಹದವರಾಗಿದ್ದರೆ ಇದು ಇನ್ನಷ್ಟು ಅಂದ ಮೂಡಿಸುತ್ತದೆ.

ಕ್ರಾಪ್ ಟಾಪ್ ಸ್ಕಿನ್ ಟೈಟ್ ಆಗಿದ್ದರೆ ಮುಜುಗರ ಪಡುವ ಅಗತ್ಯವಿಲ್ಲ. ಇದಕ್ಕೆ ಹೇಳಿ ಮಾಡಿಸಿದ ಕ್ರಾಪ್ ಸ್ವೆಟ್ಟರ್ಸ್ ಎಲ್ಲ ಮಾಲ್‌ಗಳಲ್ಲೂ ಲಭ್ಯ. ಇದನ್ನು ಧರಿಸಿ ಇನ್ನಷ್ಟು ಹೊಸ ಲುಕ್ ಪಡೆಯಬಹುದು.

ಇವೆಲ್ಲವೂ ತೆಳ್ಳಗಿದ್ದವರಿಗಾಯಿತು. ಸ್ವಲ್ಪ ದಪ್ಪಗಿದ್ದವರಿಗೂ ಇದನ್ನು ಧರಿಸುವ ಆಸೆ ಉಂಟಾದರೆ ಮಧ್ಯೆ ಹೊಟ್ಟೆ ಅಡ್ಡಬರುತ್ತದೆ. ಹೊಟ್ಟೆ ಸ್ವಲ್ಪ ದೊಡ್ಡದಾಗಿದ್ದರೆ ಕ್ರಾಪ್‌ಟಾಪ್ ಅಸಹ್ಯವಾಗಿ ಕಾಣಿಸುತ್ತದೆ ಎಂದು ಚಿಂತಿಸುವವರಿಗೂ ಈಗ ಫ್ಯಾಷನ್ ವಿನ್ಯಾಸಕಾರರು ಉಪಾಯ ಕಂಡು ಹಿಡಿದ್ದಾರೆ. ದಪ್ಪ ಇರುವವರಿಗಾಗಿ 'ಲೇಯರ್ ಜಾಕೆಟ್' ಎಂಬ ಓವರ್ ಕೋಟ್ ಲಭ್ಯವಿದ್ದು ಇದು ಹೊಟ್ಟೆಯ ಭಾಗವನ್ನು ಮುಚ್ಚುವ ಕಾರಣ, ಹೊಟ್ಟೆ ದೊಡ್ಡದಾಗಿ ಕಾಣಿಸುವುದಿಲ್ಲ, ಜೊತೆಗೆ ಫ್ಯಾಷನ್ ಪ್ರಿಯರಿಗಾಗಿ ಆಸೆಯೂ ನೆರವೇರುತ್ತದೆ.

ಟಾಪ್ ಆಯಿತು. ಬಾಟಮ್‌ನಲ್ಲಿ ಏನು ಧರಿಸಬೇಕು ಎನ್ನುವ ಪ್ರಶ್ನೆ ಕಾಡುವುದು ಸಹಜ. 'ಕ್ರಾಪ್ ಟಾಪ್' ಇದರ ಒಂದು ಪ್ಲಸ್ ಪಾಯಿಂಟ್ ಎಂದರೆ ಇದು ಸಾಮಾನ್ಯವಾಗಿ ಎಲ್ಲ ರೀತಿಯ ಬಾಟಮ್‌ಗಳಿಗೂ ಚೆನ್ನಾಗಿ ಹೊಂದಿಕೊಳ್ಳುತ್ತದೆ. ಸೆಮಿ ಫಾರ್ಮಲ್ ಉಡುಪು, ಉದ್ದನೆಯ ಸ್ಕರ್ಟ್, ಎಥ್ನಿಕ್ ಸ್ಟೈಲ್ ಯಾವುದೇ ಇದ್ದರೂ ಇದನ್ನು ಧರಿಸಬಹುದು. ಉದ್ದನೆಯ ಸ್ಕರ್ಟ್ ಜತೆಗೆ ಟೈಟ್ ಟಾಪ್ ಈಗಿನ ಬಾಲಿವುಡ್ ತಾರೆಯರಿಗೆ ಅಚ್ಚುಮೆಚ್ಚು. ಗಿಶ್ ಪೆನ್ಸಿಲ್ ಸ್ಕರ್ಟ್‌ನಲ್ಲಿ ಇನ್ನೂ ಮುದ್ದಾಗಿ ಕಾಣಬಹುದು. ಟೀ ಶರ್ಟ್ ಶೈಲಿಯ ಕ್ರಾಪ್ ಟಾಪ್ ಆದಲ್ಲಿ, ಸಾಧಾರಣ ಪ್ಯಾಂಟ್ ಆದರೂ ಪರವಾಗಿಲ್ಲ.

ತುಂಬಾ ತೆಳ್ಳಗಿದ್ದರೆ ಹೆಚ್ಚು ಪ್ರಿಂಟ್ ಇರುವ ಬಟ್ಟೆಯ ಡ್ರೆಸ್ ಧರಿಸಿ. ಕುಳ್ಳಗಿದ್ದರೆ ಹೈ ಹೀಲ್ಡ್ ಧರಿಸಿ. ಇದರಿಂದ ನಿಮ್ಮ ಜೊತೆ ಬಟ್ಟೆಯ ಅಂದವೂ ಹೆಚ್ಚುವುದು.

ಬಾಬ್‌ಕಟ್, ಬ್ರಷ್ ಕಟ್, ಆಫ್ರೋ, ಬೀಹೈವ್ ಮುಂತಾದ ಹೇರ್ ಸ್ಟೈಲ್‌ಗಳಿಂದ ಅಂದವನ್ನು ಇನ್ನಷ್ಟು ಹೆಚ್ಚಿಸಿಕೊಳ್ಳಬಹುದು.

ಹಾಗೆಯೇ ಒಂದು ಮಾತು. ಇದನ್ನು ಸಭೆ, ಸಮಾರಂಭಗಳಲ್ಲಿ ಮಾತ್ರ ಧರಿಸಿದರೆ ಉತ್ತಮ. ಶಾಲಾ, ಕಾಲೇಜುಗಳಿಗೆ ಇದು ಹೇಳಿ ಮಾಡಿಸಿದ ಉಡುಗೆಯಲ್ಲ.